ತಿಳಿಸುವ ಬೇರೆಗೆ **ಚರ್ಚೆ**

(೧) ಕಂದಾಯ ಇಲಾಖೆಯ ನೌಕರರ ಲೇಖನಿ ಸ್ಥಗಿತ ಮುಷ್ಕರ

ಶ್ರೀ ಆರ್. ಎನ್. ನಾಯಕ್ (ಭಟ್ಕಳ್) ಮತ್ತು ಶ್ರೀ ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರಕಾರದ ಕಂದಾಯ ಇಲಾಖೆಯ ನೌಕರ ಸಂಘವು ದಿನಾಂಕ ೩-೧-೮೬ ರಿಂದ ೬-೧-೮೬ರ ವರೆಗೆ ಲೇಖನಿ ಸ್ಥಗಿತದ ಮೂಲಕ ಮುಷ್ಕರ ಮಾಡಿದ್ದು ನ್ಯಾಯ ಸಮ್ಮತವಾದ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾಡುತ್ತಿದ್ದು ಈವರೆಗೂ ಯಾವುದೇ ಬೇಡಿಕೆಗಳನ್ನು ಸರಕಾರ ಈಡೇರಿಸದಿರುವುದ ಕ್ಕಾಗಿ ಈ ದಿನ ಅಂದರೆ ದಿನಾಂಕ ೨೭-೩-೧೯೮೬ ರಂದು ಬೃಹತ್ ವಿಧಾನ ಸೌಧ ಚಲೋ ಮಂತ್ರು ೧೮-೪-೮೬ ರಿಂದ ನಿರ್ದಿಷ್ಟ ಕಾಲದ ಅಸಹಕಾರ ಚಳುವಳಿ ಮಾಡುತ್ತಿರುವುದರಿಂದ ರಾಜ್ಯದ ಆಡಳಿತ ವ್ಯವಸ್ಥೆ ಹದಗೆಟ್ಟುಹೋಗುವುದರ ಜೊತೆಗೆ ಕಂದಾಯ ಇಲಾಖೆಯ ನೌಕರರ ಸಮಸ್ಯೆಗಳು ಹೆಚ್ಚಾಗುವು ದನ್ನು ಸದನದಲ್ಲಿ ಸರಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರು ನಗರಾಭಿವೃದ್ಧಿ ಸಚಿವರು).—ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

(೨) ರೋಣ್ ತಾಲ್ಲೂಕಿನ ಗಜೇಂದ್ರ ಗಡದ ಕೆಲವು ಗ್ರಾಮಗಳಲ್ಲಿ ವಿದ್ಯುತ್ ಪೋಲ್ಟ್ರೇಜ್ ಕಡಿಮೆಯಾಗಿ ರೈತರಿಗೆ ಉಂಟಾದ ತೊಂದರೆ

ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೇ, ರೋಣ ತಾಲ್ಲೂಕು, ಗಜೇಂದ್ರಗಡ ಭಾಗದ, ಲಕ್ಕಲಕಟ್ಟಿ, ದಿಂಕೂರ, ನಾಗೇಂದ್ರಗಡ, ಬೇವಿನಕಟ್ಟಿ ಸೂಡಿ, ಗ್ರಾಮಗಳಲ್ಲಿ ವಿದ್ಯುತ್ ಪೋಲ್ಟೇಜ್ ತೀರಾ ಕಡಿಮೆ ಇದ್ದು ಮೇವು ಬೆಳೆಯಲು ಸಾಲ ತೆಗೆದುಕೊಂಡ ತುಂತುರ ನೀರಾವರಿ ತೋಟಪಟ್ಟಿಯ ರೈತರು ಕಂಗಾಲಾಗಿದ್ದು, ವಿದ್ಯುತ್ ಮೋಟಾರುಗಳನ್ನು ಸುಟ್ಟು ಕೊಂಡಿರುವವರು. ಪೋಲ್ಟೇಜ್‌ಗಳನ್ನು ಸುಧಾರಿಸಲು ಕ್ರಮವನ್ನು ಸಂಬಂಧಪಟ್ಟವರು ಕೈಗೊಂಡಿದ್ದರೂ, ಅವಶ್ಯಕ ವಸ್ತುಗಳ ಕೊರತೆ ಇರುವುದರಿಂದ ಪೋಲ್ಟೇಜ್ ಸುಧಾರಣೆಯು ನಿಧಾನವಾಗುತ್ತಿದೆ. ರೈತರು ವಿದ್ಯುತ್ ಕಛೇರಿಗಳಿಗೆ ದಂಡು ಹೋಗುತ್ತಿದ್ದು, ಪರಿಸ್ಥಿತಿ ಗಂಭೀರವಾಗಿದ್ದರೂ ತ್ವರಿತ ಕಾರ್ಯ ಇಲ್ಲ. ರೋಣ ತಾಲ್ಲೂಕಿನ ವಿದ್ಯುತ್ ಕೇಂದ್ರದಿಂದ ಕುಷ್ಟಗಿ ತಾಲ್ಲೂಕಿನ ಹಳ್ಳಿಗಳಿಗೆ ವಿದ್ಯುತ್ ಸರಬರಾಜು ಆಗುತ್ತಿದೆ. ರೋಣದ ವಿದ್ಯುತ್ ಇಲಾಖೆ ಲಿಂಕ್ ಲೈನ್‌ನ್ನು ಎಳೆಯುವಲ್ಲಿ ಸಲಕರಣೆಗಳ ಕೊರತೆಯಿಂದ ತೊಂದರೆ ಯಾಗಿದೆ. ಹಾಗೆ ಕುಷ್ಟಗಿ ಕೇಂದ್ರದಿಂದ ಹೊಸದಾಗಿ ಎಳೆಯುತ್ತಿರುವ ಲಿಂಕ್ ಲೈನ್ ಕೆಲಸ ಗಂಗಾವತಿ ಡಿವಿಜನ್ನಿನವರು ಬೇಗನೆ ಮುಗಿಸಬೇಕಾ ಇಷ್ಟು ಕಂಡೂ ನಿಧಾನದ ಹೆಜ್ಜೆಯನ್ನು ಸರಕಾರ ಇಟ್ಟಿರೆ, ಪರಿಸ್ಥಿತಿ ಹಾಗೂ ಪರಿಸರದ ಪ್ರತಿಭಟನೆಯ ತೀವ್ರ ಸ್ವರೂಪದ ಸನಿಹದಲ್ಲಿ ಕಾಣುವುದು ಮುನ್ಸೂಚ ನೆಯೂ ಹಾದು ಅಂತೆಯೇ ತೀವ್ರಕ್ರಮ ಅವಶ್ಯ ಇದನ್ನು ಈ ಮೂಲಕ ವಿದ್ಯುತ್ ಖಾತೆಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು ಎಂದು ಹೇಳುತ್ತೇನೆ.

(೩) ಬೆಳ್ತಂಗಡಿ ತಾಲ್ಲೂಕಿನ ನಿಡ್ಲೆ ಗ್ರಾಮದ ರಾಮೇಗೌಡ ಎಂಬುವರ ಕೊಲೆಯ ಪತ್ತೆ ಕಾರ್ಯದಲ್ಲಿ ಪೋಲೀಸರ ನಿಷ್ಕ್ರಿಯತೆ

ಶ್ರೀ ಕೆ. ಪಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ, ಬೆಳ್ತಂಗಡಿ ತಾಲ್ಲೂಕು ನಿಡ್ಲೆ ಗ್ರಾಮದಲ್ಲಿ ಕೇವಲು ಎಂಬಲ್ಲಿ ತಾರೀಖು ೧೭-೯-೮೫ರಿಳ ರಂದು ರಾಮಗೌಡ ಎಂಬುವರ ಕೊಲೆಯಾಗಿದ್ದು ಈ ವಿಚಾರದಲ್ಲಿ ಅನೇಕ ಸಲ ಊರವರು ಉಪ್ಪಿನಂಗಡಿಯ ಪಿ. ಎಸ್. ಐ. ಯವರಿಗೆ ದೂರಿತ್ತರೂ ಪ್ರಯೋಜನವಾಗದೆ ಕೊನೆಗೆ ಡಿ. ಐ. ಜಿ. ಯವರಿಗೂ ದೂರೆತ್ತರೂ ಕೂಡ ಪ್ರಯೋಜನವಾಗಲಿಲ್ಲ. ಈ ವಿಚಾರವನ್ನು ನಾನು ಡಿ. ಐ. ಜಿ. ಯವರಿಗೆ ಒಂದು ಪತ್ರವನ್ನು ಬರೆದದ್ದೆ ಅಲ್ಲದೆ ಸಂಗಡ